SL.22

ಸ್ಮೃತಿ 21/7/04

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಅಂಗವಿಕಲರು, ಗುರುತಿನ ಚೀಟಿಯ ಮೇಲೆ ಪಡೆಯಬಹುದಾದ ಪ್ರಯೋಜನಗಳ ಕುರಿತು.

ಓದಲಾಗಿದೆ:-[೧]ಸರ್ಕಾರದ ಆದೇಶ ಸಂಖ್ಯೆ/ಮಮಅ/೩೩/ಪಿಹೆಚ್‌ಪಿ/೨೦೦೨.
ದಿ.೦೨-೦೩-೦೨.
[೨]ಸರ್ಕಾರದ ಆದೇಶಸಂಖ್ಯೆ.ಮಮಇ/೧೦೭/ಪಿಹೆಚ್‌ಪಿ/೨೦೦೩. ದಿ/೧೧-೦೭-೨೦೦೩.
[೩]ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರ
ಪತ್ರಸಂಖ್ಯೆ/ಸಿಅಕಇ/ಗು.ಚೀ/ವಾ.೨೦೦೩-೦೪ ೧೬೪೫೦/ದಿನಾಂಕ.೧೬-೦೩-೨೦೦೪.

======

ಪ್ರಸ್ತಾವನೆ:- [illegible] ನೀಡಲು ಮಾರ್ಗದರ್ಶನ ಹಾಗೂ ವಿತರಿಸುವ ವಿಧಾನವನ್ನು ತಿಳಿಸಲಾಗಿರುತ್ತದೆ. ಸದರಿ ಆದೇಶದಲ್ಲಿ ತಜ್ಞ ಸರ್ಕಾರಿ ವೈದ್ಯಾಧಿಕಾರಿಗಳು ಖಾಸಗಿ ವೈದ್ಯಾಧಿಕಾರಿಗಳೊನ್ನೊಳಗೊಂಡ ಆರೋಗ್ಯ ತಪಾಸಣಾ ಶಿಬಿರವನ್ನು ಪ್ರತಿ ಹೋಬಳಿ ಮಟ್ಟದಲ್ಲಿ ಏರ್ಪಡಿಸಿ ,ಈ ಶಿಬಿರದಲ್ಲಿ ತಜ್ಞ ವೈದ್ಯಾಧಿಕಾರಿಗಳು ಅಂಗವಿಕಲತೆಯನ್ನು ದೃಢೀಕರಸಿ ಪ್ರಮಾಣಪತ್ರ ನೀಡತಕ್ಕದ್ದೆಂದು ಸೂಚಿಸಲಾಗಿರುತ್ತದೆ.

ಮೇಲೆ ಕ್ರಮಸಂಖ್ಯೆ[೨]ರಲ್ಲಿ ಓದಲಾದ ಆದೇಶದಲ್ಲಿ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವಿವಿಧ ಬಗೆಯ ಅಂಗವಿಕಲತೆಗಳನ್ನು ಗುರುತಿಸಿ ಅಂಗವಿಕಲ ಪ್ರಮಾಣ ಪತ್ರ ನೀಡಲು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಯನ್ನು ರಚಿಸಲಾಗಿದೆ.

ನಿರ್ದೇಶಕರು, ಅಂಗವಿಕಲ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರು ಮೇಲೆ ಕ್ರಮಸಂಖ್ಯೆ[೩]ರಲ್ಲಿ ಓದಲಾದ ಪತ್ರದೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಅಂಗವಿಕಲರಿಗೆ ಗುರುತಿನ ಚೀಟಿ ಇದ್ದರೂ ಸಹ ಸರ್ಕಾರದ ಪ್ರಯೋಜನಗಳನ್ನು ಪಡೆಯಲು ಅಂಗವಿಕಲರಿಂದ ಸರ್ಟಿಫಿಕೇಟ್ ಕೇಳುತ್ತಿದ್ದು, ಇದರಿಂದ ಅಂಗವಿಕಲರಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿ, ಅಂಗವಿಕಲರಿಗೆ ನೀಡಲಾದ ಗುರುತಿನ ಚೀಟಿಯ ಮೇಲೆ ಅವರು ಸರ್ಕಾರದಿಂದ ಯಾವ ಯಾವ ಪ್ರಯೋಜನ ಪಡೆಯಲು ಅರ್ಹರಿರುತ್ತಾರೆ ಎಂಬುದನ್ನು ನಮೂದಿಸಲು ಸರ್ಕಾರದ ಮಂಜೂರಾತಿ ಕೇಳಿದ್ದಾರೆ, ಅಲ್ಲದೇ ಈಗಾಗಲೇ ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಗಳನ್ನು ರಚಿಸಿರುವ ಹಿನ್ನೆಲೆಯಲ್ಲಿ ಗುರುತಿನ ಚೀಟಿಯಲ್ಲಿ ವೈದ್ಯಕೀಯ ಮಂಡಳಿಯ ಅಧ್ಯಕ್ಷರು/ಸದಸ್ಯರ ಹುದ್ದೆಗಳನ್ನು ನಮೂದಿಸಿ ಕನಿಷ್ಟ ಇಬ್ಬರು ಸದಸ್ಯರು ಸಹಿ ಮಾಡಲು ಸೂಚಿಸಿ ಇನ್ನು ಮುಂದೆ ಒಂದೇ ಬಣ್ಣದಲ್ಲಿ ಪರಿಶೀಲಿಸಿ ಈ ಕೆಳಗಿನ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶಸಂಖ್ಯೆ:ಮಮಇ:೧೮೪:ಪಿಹೆಚ್‌ಪಿ: ೨೦೦೪:ಬೆಂಗಳೂರು:
ದಿನಾಂಕ:28-೦೬-೨೦೦೪.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಅಂಗವಿಕಲರಿಗೆ ನೀಡಲಾಗುತ್ತಿರುವ ಗುರುತಿನ ಚೀಟಿಯಲ್ಲಿ ಈ ಕೆಳಗಿನ ಪ್ರಯೋಜನಗಳನ್ನು ಪಡೆಯಲು ಅಂಗವಿಕಲರು ಅರ್ಹರಿರುತ್ತಾರೆಂದು ನಮೂದಿಸಲು ಸರ್ಕಾರದ ಅನುಮತಿ ನೀಡಿದೆ.

[೧]ಉಚಿತ/ರಿಯಾಯಿತಿ ಬಸ್ ಪಾಸ್ ಸೌಲಭ್ಯ ಪಡೆಯಲು,
[೨]ರೈಲ್ವೆ ರಿಯಾಯಿತಿ ಪಡೆಯಲು,
[೩]ಏರೋಪ್ಲೇನ್‌ನಲ್ಲಿ ಪ್ರಯಾಣಿಸಲು ರಿಯಾಯಿತಿ ಪಡೆಯಲು,
[೪]ಆದಾಯ ತೆರಿಗೆ ಪ್ರಯೋಜನ ಪಡೆಯಲು,
[೫]ಸರ್ಕಾರದ ವಿವಿಧ ಯೋಜನೆಗಳಲ್ಲಿ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಬೇಕಾದ

೨/-

ಸಂದರ್ಭಗಳಲ್ಲಿ ಗುರುತಿನ ಚೀಟಿಯನ್ನು ತೋರಿಸಿ/ನಕಲನ್ನು ನೀಡಿ ಪ್ರಯೋಜನ ಪಡೆಯಬಹುದು.

[೬]ರಾಜೀವ್‌ಗಾಂಧಿ,ಸ್ವರ್ಣರೋಜ್ಗಾರ್ ಯೋಜನೆ ಮುಂತಾದ ನಿವೇಶನ ಮತ್ತು ಮನೆಗಳನ್ನು ಪಡೆಯಲು.

ಸರ್ಕಾರವು ಪ್ರತಿ ಜಿಲ್ಲೆಯಲ್ಲಿ ವೈದ್ಯಕೀಯ ಮಂಡಳಿಯನ್ನು ರಚನೆ ಮಾಡಿರುವ ಹಿನ್ನೆಲೆಯಲ್ಲಿ ಗುರುತಿನ ಚೀಟಿಯಲ್ಲಿ ವೈದ್ಯಕೀಯ ಮಂಡಳಿಯ ಅಧ್ಯಕ್ಷರು/ಸದಸ್ಯರ ಹುದ್ದೆಗಳನ್ನು ನಮೂದಿಸಿ ಕನಿಷ್ಟ ಇಬ್ಬರು ಸದಸ್ಯರು ಸಹಿ ಮಾಡಲು ಹಾಗೂ ಇನ್ನು ಮುಂದೆ ಒಂದೇ ಬಣ್ಣದಲ್ಲಿ ಗುರುತಿನ ಚೀಟಿಯನ್ನು ಮುದ್ರಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

[ಆರ್.ಎಂ.ಚಂದ್ರಮ್ಮ],
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ,

ಇವರಿಗೆ:
ಸಂಕಲನಕಾರರು ಕರ್ನಾಟಕ ರಾಜ್ಯ ಪತ್ರ,ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕಳುಹಿಸಿದೆ.

ಪ್ರತಿಯನ್ನು:-

[೧]ಮಹಾಲೇಖಪಾಲರು,ಕರ್ನಾಟಕ ಬೆಂಗಳೂರು,
[೨]ಎಲ್ಲಾ ಇಲಾಖಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
[೩]ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಸಾರಿಗೆ ಭವನ,ಬೆಂಗಳೂರು.
[೩]ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
[೪]ಆಯುಕ್ತರು ಅಂಗವಿಕಲರ ಅಧಿನಿಯಮ ಬೆಂಗಳೂರು,
[೪]ಆಯುಕ್ತರು,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆನಂದರಾವ್ ವೃತ್ತ, ಬೆಂ
[೫]ನಿರ್ದೇಶಕರು, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು.
[೬]ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ಇಲಾಖೆ,
[೭]ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
[೮]ಎಲ್ಲಾ ಜಿಲ್ಲಾಧಿಕಾರಿಗಳು
[೯]ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
೧೦]ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಿಂದುಳಿದ ಅಭಿವೃದ್ಧಿ ನಿಗಮ ಬೆಂಗಳೂರು [ಕೆ.ಬಿ.ಸಿ.ಡಿಸಿ]
೧೧]ನಿರ್ದೇಶಕರು,ರಾಜ್ಯ ಹುಜೂರ್ ಖಜಾನೆ ಬೆಂಗಳೂರು.
೧೨]ಎಲ್ಲಾ ಜಿಲ್ಲಾ ಸರ್ಜನಗಳು
೧೩]ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
೧೪]ಎಲ್ಲಾ ಉಪ ನಿರ್ದೇಶಕರು, ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ,ಬೆಂಗಳೂರು.
೧೫]ಎಲ್ಲಾ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಗಳು.

ಪ್ರತಿ:-

[೧]ಪ್ರಧಾನ ಕಾರ್ಯದರ್ಶಿಗಳು;ಉಪಕಾರ್ಯದರ್ಶಿಗಳು;ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಆಪ್ತಶಾಖೆ.
[೨]ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.